ಗಕ್ಕನೆ ತಿರುಗಿದರು ಭಾವ. ಆ ಧ್ವನಿ ಅವರಿಗೆ ಮೂರು ವರ್ಷಗಳಷ್ಟು ಹಳೆಯದು. "ಅರೆ! ಶ್ರೀರಾಮ್ ನೀವು?... ಇಲ್ಲಿ?..." ಎಂದಳು. ಪ್ರಿನ್ಸಿಪಾಲರು ಹುಡುಗಿಗೆ ವಿಷಯ ತಿಳಿಸಿದರು. ಗಂಟಿಕ್ಕಿದ್ದ ಅವಳ ಮುಖ ಈಗ ಪ್ರಸನ್ನವಾಯಿತು. "ಎಂಥದ್ದು ಮಹಾರಾಯ್ತಿ, ನನ್ನ ಭಾವಮೈದುನನಿಗೇ ಇಷ್ಟೊಂದು ಹಿಂಸೆ ಕೊಡುವುದಾ? ಹಿ ಈಸ್ ಇನ್ನೋಸೆಂಟ್..." ಶ್ರೀರಾಮ್ ಹೇಳುತ್ತಿದ್ದಂತೆಯೇ ದೇವರಾಜನ ಬಳಿಗೆ ಬಂದು, "ಸ್ಸಾ... ರಿ" ಎಂದಳು. ಅವಳ ದೂರು ಹಿಂದಕ್ಕೆ ಬಂತು. "ನಾನೇ ದುಡುಕಿಬಿಟ್ಟೆ. ಇವರು ಶ್ರೀರಾಮ್ ಅಂತ, ಮೂರು ವರ್ಷದಿಂದ ನಮ್ಮ ಮನೆಯಲ್ಲೇ ಪೇಯಿಂಗ್ ಗೆಸ್ಟ್ ಆಗಿದ್ದರು. ದೇವರಾಜ್ ಇವರ ರಿಲೇಟಿವ್ ಅಂತ ತಿಳೀಲಿಲ್ಲ. ಕಾಲೇಜಿಗೆ ಸೇರಿದಾಗಿನಿಂದ ಪೆಕ್ಯುಲಿಯರ್ ಆಗಿ ನಡೆದುಕೊಳ್ಳುತ್ತಿದ್ದುದನ್ನು ಕಂಡಿದ್ದೆ. ಬೇಕಂತ ಸೈಕಲ್ ಬಿಟ್ಟಿರಬಹುದು ಅಂತ ಮಿಸ್ಟೇಕ್ ಮಾಡಿಕೊಂಡುಬಿಟ್ಟೆ. ಸಾರಿ ದೇವ್... ಸಾರಿ ಶ್ರೀರಾಮ್... ಐ ಯಾಮ್ ವೆರಿ ಸಾರಿ ಸರ್..."

ದೇವ್? ಆಗ ಕೆನ್ನೆಗೆ ಹೊಡೀವಾಗ ದೆವ್ವ ಮೆಟ್ಕೊಂಡಿತ್ತೇನೋ? ಈಗ ಮಳ್ಳಿ ಥರಾ ಸಾರಿ, ಸಾರಿ ಅಂತ ಬಂಬಡಾ ಹೊಡೀತಿದ್ದಾಳೆ. ಆವತ್ತು ನಡು ರಸ್ತೇಲಿ ಘಟೀರ್ ಅಂತ... ನನ್ನ ಭಾವ ಏನು ಕಡಿಮೆ ಇಲ್ಲ... ದೇವರಾಜನೊಳಗೆ ಸಿಟ್ಟು ಹಾಗೆಯೇ ಉಳಿದಿತ್ತು. ಪ್ರಿನ್ಸಿಪಾಲರ ಕೋಣೆಯಿಂದ ಹೊರಬಂದ ಶ್ರೀರಾಮ್, ಆಕೆಯನ್ನೂ ಮನೆಗೆ ಕರೆದು ತಂದರು. ಹೆಂಡತಿಯನ್ನ ಪರಿಚಯಿಸಬೇಕಿತ್ತು. ಸೈಕಲ್ ಅಪಘಾತದ ಕಥೆ ಹೇಳಬೇಕಿತ್ತು. ಹೆಂಡತಿ, ಹೆಂಡತಿ ತಮ್ಮನ ತಮ್ಮನ ಪರಿಚಯ ರಮ್ಯವಾಗಿ ಆಯಿತು.

ಚಹ ಕುಡಿಯುತ್ತಾ ಕೇಳಿದಳು–

"ನಿಮ್ಮ ಹೆಸರೇ ಮರೆತು ಹೋಗುತ್ತೆ ಸು... ಚಿತ್ರ... ಹೌದಾ?"

"ಅಲ್ಲ ಸುಮಿತ್ರ ಅಂತ. ನನ್ನ ತಮ್ಮನ ಮೇಲೆ ಕಂಪ್ಲೇಂಟ್ ಕೊಟ್ಟುಬಿಟ್ಟಿರಂತೆ!... ಅಯ್ಯೋ ಅವನು ದಡ್ಡ... ಅಂದ್ಹಾಗೆ ನಿಮ್ಮ ಹೆಸರು?"

"ಉಷಾ ನಾಯಕ್ ಅಂತ, ಉಷಾ ಅನ್ನಿ. ನಾನೂ ಫಸ್ಟ್ ಇಯರ್ ಪಿಯುಸಿ. ನಿಮ್ಮ ತಮ್ಮ ದೇವ್, ನಾನೂ ಇಬ್ಬರೂ ಒಂದೇ ಕ್ಲಾಸ್. ಆದರೆ ಕಾಂಬಿನೇಷನ್ ಬೇರೆ ಬೇರೆ."

...ದೇವ್ ಎಲ್ಲವನ್ನೂ ಕೇಳಿಸಿಕೊಳ್ಳುತ್ತಾ ಹೊರಗೆ ಜಿಡಿ ಮಳೆಯನ್ನು ದಿಟ್ಟಿಸುತ್ತಾ ನಿಂತಿದ್ದ. ನಡುರಸ್ತೆ, ಘಟೀರನೆ ಬಿದ್ದ ಏಟು, ತರಗತಿಯಲ್ಲಿ ನಗೆ ಪಾಟಲಾದದ್ದು ಅವನನ್ನು ಸುಡುತ್ತಲೇ ಇದ್ದವು.

ದೇವರಾಜನ ಮುಗ್ಧತೆ ಈಗ ಉಷಾಗೆ ಸ್ಥಳಾಂತರವಾಯ್ತು. "ನನ್ನನ್ನು ಕ್ಷಮಿಸಿ ದೇವ್, ದೂರದಿಂದ ಬಂದ ನಿಮ್ಮನ್ನು ನಾನು ಎಷ್ಟು ಕೆಟ್ಟದಾಗಿ ವೆಲ್ಕಂ ಮಾಡಿಬಿಟ್ಟೆ! ಹೌದಲ್ವಾ? ಇಂದು ನೀವೆಲ್ಲಾ ಸಂಜೆ ನಮ್ಮ ಮನೆಗೆ ಬರಲಿಕ್ಕುಂಟು. ಪಪ್ಪನ ಎದುರು ಕೆನ್ನೆಗೆ ಹೊಡೆದುಕೊಂಡು ನಿಮ್ಮ ಕ್ಷಮೆ ಕೇಳ್ತೇನೆ. ಓಕೇನಾ?" ದೇವರಾಜನ ಬಳಿಗೆ ಬಂದು ಕೈಹಿಡಿದುಕೊಂಡು ಉಷಾ ಯಾಚಿಸಿದಂತೆ ಅಂದಾಗ ದೇವರಾಜ ಮಾತನಾಡಲು ಏನೂ ತಿಳಿಯದೆ ಸ್ವಲ್ಪ ಹೊತ್ತು ಮೌನವಾಗಿದ್ದವನು ಬಿಕ್ಕಿ ಅಳಲು ಶುರುಮಾಡಿಬಿಟ್ಟ. ತಾನು ದೊಡ್ಡ ತಪ್ಪು ಮಾಡಿಬಿಟ್ಟೆ ಅಂತ ಉಷೆಗೆ ಅನ್ನಿಸಿರಬೇಕು. ಸುಮಿತ್ರಾ ಬಳಿಗೆ ಬಂದು –

"ನೋಡಿ ಅಕ್ಕ, ಇಷ್ಟಕ್ಕೆ ಅಳುವುದಾ? ಆ ರಸ್ತೆಯಲ್ಲಿ ಅಂಥ ಹುಡುಗರು ಹೆಚ್ಚುಂಟು. ನನಗೆ ಹಾಗೆ ಮಾಡುವವರನ್ನು ಕಂಡರೆ ತುಂಬಾನೇ ದ್ವೇಷ. ದುಡುಕಿ ಹೊಡೆದದ್ದು ನನ್ನ ತಪ್ಪು. ನೀವು ನನ್ನ ತಂಗಿ ಅಂತ ತಿಳಿಯಿರಿ. ಶ್ರೀರಾಮ್ ಕೇಳಿ, ನಾನು ಎಂಥ ಒಳ್ಳೆಯವಳು ಅಂತ. ಅವರಿಗೆ